ಬೂಕನಕೆರೆ ವಿಜೇಂದ್ರ, ಮೈಸೂರು
*ತಲೆಯೇ ಇಲ್ಲದ ರಾಜಕಾರಣಿಗಳಿಗೇಕೆ ಕಿರೀಟ?*



ಡಸ್ಟ್‌ಬಿನ್ ಒಳಗೆ ಎಷ್ಟೇ ಕಚಡಾ ಇದ್ದರೂ ಟಾಪ್ ನೋಡೋ ಮಟ್ಟಕ್ಕಿರಬೇಕಲ್ಲವೇ!

ಸಂತೇಬೆನ್ನೂರು ಫೈಜ್ನಟ್ರಾಜ್, ದಾವಣಗೆರೆ
*ಪ್ರೀತಿಗೆ ಎಷ್ಟು ಮುಖ ಸಾರ್?*
ಒಂದೇ. ಮಿಕ್ಕವೆಲ್ಲ ಸಮಾನಾಂತರ ರೇಖೆಯಲ್ಲಿ ನಿಲ್ಲಿಸಿದ ಎರಡು ಕನ್ನಡಿಗಳಲ್ಲಿನ ಪ್ರತಿಬಿಂಬಗಳು.

ಜೆ.ಸಿ. ರವಿಕುಮಾರ್, ಜಯಸುವರ್ಣಪುರ
*ವಯಸ್ಸಿಗೆ ಬಂದ ಮಕ್ಕಳು ಗಂಟೆಗಟ್ಟಲೆ ಫೋನಿನಲ್ಲಿ ಮಾತಾಡ್ತಿದಾರೆ ಅಂದ್ರೆ ಏನರ್ಥ?*
ಅನರ್ಥ!

ಕುಮಾರ್, ಮಲ್ಲೇಶ್ವರ
*ಅಪ್ಪ, ಅಮ್ಮ, ಮಗ ಎರಡಕ್ಷರದ ಪದಗಳು. ಮಗಳು ಮಾತ್ರ ಏಕೆ ಮೂರಕ್ಷರ?*
ಅಳಿಯ ಎಂಬ ಮೂರಕ್ಷರಕ್ಕೆ ಸರಿಸಮನಾಗಿ ಇರಬೇಕಲ್ಲ.

ಆರ್. ಮಧುಸೂದನ್, ಹಾಸನ
*ನಾನು ಒಳ್ಳೆಯ ಕೆಲಸಕ್ಕೆ ಹೊರಟಾಗಲೆಲ್ಲ ಕಾಗೆ ಕಾ ಕಾ ಎಂದು ಕೂಗುತ್ತದೆ. ಕಾರಣ ಏನಿರಬಹುದು?*




ಕಾ – ಕಾರ್ಯವಾಗಲಿ; ಕಾ – ಕಾಸಾಗಲಿ ಎಂದು. ಆಗಲಾದರೂ ನೀವು ಹಂಚಿ ತಿನ್ನುವಿರೆಂಬುದು ಅದರ ನಿರೀಕ್ಷೆಯಂತೆ.

ಎಸ್. ಪ್ರಭಾ, ಬೆಂಗಳೂರು
*ಲೇಖನಿ ಕತ್ತಿಗಿಂತ ಹರಿತ; ಲೇಖನಿಗಿಂತ ಹರಿತವಾದುದು ಯಾವುದು?*
ಸಂಪೂರ್ಣ ಸಡಿಲವಾದ ನಾಲಿಗೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು
*ಶ್ರೀರಾಮ ಮಂಡಳಿಗಳು ಇರುವಂತೆ ಸೀತಾ ಮಂಡಳಿಗಳು ಏಕಿಲ್ಲ?*
ಇದ್ದವಂತೆ. ಕೆಲವನ್ನು ರಾವಣರು ಹಾರಿಸಿಕೊಂಡುಹೋದರಂತೆ; ಕೆಲವು ಅಗ್ನಿಪರೀಕ್ಷೆಯಲ್ಲಿ ಬರ್ನ್ ಆದವಂತೆ.

ಪಿ.ಜೆ. ರಾಘವೇಂದ್ರ, ಮೈಸೂರು
*ನಾಸ್ತಿಕರಿಗೇಕೆ ಭಗವಂತನ ಹೆಸರು?*
ಹೆಸರಲ್ಲೇನಿದೆ? ಆಸ್ತಿ ಮುಖ್ಯ, ಒಳಗೂ ಹೊರಗೂ!

ಬಿ.ಎ. ಅಜರುದ್ದೀನ್, ಬಾಚಹಳ್ಳಿ
*ಮಹಾಭಾರತದಲ್ಲಿ ಅರ್ಜುನನ ಪ್ರಶ್ನೆಗಳಿಗೆ ಶ್ರೀಕೃಷ್ಣ ಉತ್ತರಿಸುವಂತೆ ನೀವು ಕೇಳುಗರ ಪ್ರಶ್ನೆಗಳಿಗೆ ಉತ್ತರಿಸುತ್ತೀರಂತೆ?*
ಎಲ್ಲಿಗೆಲ್ಲಿಯ ಹೋಲಿಕೆ. ಅವನೋ ಪಾರ್ಥಸಾರಥಿ; ನಾನೋ ಪೂರ್ತಿ ಸ್ವಾರ್ಥಿ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಈ ಜನಿವಾರ, ಶಿವದಾರಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು ಹೇ ರಾಂ?*
ವ್ಯಕ್ತಿಯ ಮೈಮೇಲೆ ಯಾವ ದಾರ ಎನ್ನುವುದು ಮುಖ್ಯವಲ್ಲ; ಅವನು ಎಷ್ಟು ಜವಾಬ್–ದಾರ ಎನ್ನುವುದು ಮುಖ್ಯ.

ಪುಟ್ಟಗೌರಿ, ಕಲ್ಬುರ್ಗಿ
*ಜೀವನ ಕ್ಷಣಿಕವಾದರೂ ಆಸ್ತಿ, ಹಣ, ಚಿನ್ನದ ಹಂಬಲವೇಕೆ?*
ಊಟ ಕ್ಷಣಿಕವಾದರೂ ಒಬ್ಬಟ್ಟು, ಪಾಯಸ, ಆಂಬೊಡೆ, ಪಲ್ಯ, ಕೋಸಂಬರಿ, ಕೂಟು, ಹಪ್ಪಳ, ಸಂಡಿಗೆ ಬಯಸುವಂತೆಯೇ ಇದೂ ಸಹ.

ಶಶಾಂಕ್ ಪ್ರಿಯಾ, ಪೆನ್ನುಳ್ಳಿ
*ಇಲ್ಲೊಬ್ಬಳು ಹಳ್ಳಿ ಹುಡ್ಗಿ ಗಂಡನ ಹೆಸರು ಹೇಳಲ್ವಂತೆ?*
ಗಂಡನ ಹೆಸರು ತಮ್ಮಣ್ಣ. ತಮ್ಮ ಅನ್ನಕ್ಕಾಗಲ್ಲ, ಅಣ್ಣ ಅನ್ನಕ್ಕಾಗಲ್ಲ, ಅದಕ್ಕೇ ಹೇಳಲ್ವಂತೆ.

ಶ್ವೇತಾಲಕ್ಷ್ಮಿ, ಅಮ್ಮೆ, ಬೆಂಗಳೂರು
*ಕೆಲವರು ಪ್ರೀತಿಸಿ ಮದುವೆಯಾಗಿ ನಂತರ ಜಾತಿ ಜಾತಿ ಎಂದು ಬಡಿದಾಡುವರಲ್ಲಾ, ಏಕೆ?*
ಪ್ರೀತಿಯ ಕ್ಯಾಟರಾಕ್ಟ್ ಕಳಚಿದ ಮೇಲೆ ಪರಿಸ್ಥಿತಿಯ ಅರಿವು ಮೂಡುತ್ತದಲ್ಲ!

ಮುರಲೀಧರ ಕುಲಕರ್ಣಿ, ಬೀದರ್
*ಸಾರಿಗೂ, ಸಾರಾಯಿಗೂ ಇರುವ ವ್ಯತ್ಯಾಸವೇನು?*
ಒಂದು ರುಚಿ; ಇನ್ನೊಂದು.... ಛೀ.....!

## ಬಹುಮಾನಿತ ಪ್ರಶ್ನೆ

ನಾಗವೇಣಿ ಸೋಮಶೇಖರ್, ಮೈಸೂರು
ಈಗಿನ ಯಾವ ತರಕಾರಿಗಳಲ್ಲೂ ರುಚಿಯಿಲ್ಲ, ಹೂಗಳಲ್ಲಿ ಪರಿಮಳವಿಲ್ಲ. ಏಕೆ?
ತಿಪ್ಪೆ, ತೊಪ್ಪೆಗಳ ಗೊಬ್ಬರವಿಲ್ಲದೆ ಬೆಳೆದದ್ದೆಲ್ಲ ಸಪ್ಪೆ, ಸಿಪ್ಪೆ ಆಗಿರೋದ್ರಿಂದ!

ಡೈರಿ ವಿಶ್ವನಾಥ್, ಬೆಂಗಳೂರು
*ಹುಡುಗಿಯರು ಓಲ್ಡ್ ಫರ್ನಿಚರ್ ಇದ್ದರೆ ಮದುವೆಯಾಗಲ್ಲ ಅಂತಾರೆ. ಯಾಕೆ?*
ಕರಕರ ಸದ್ದು ಮಾಡತ್ತೆ, ಕಂಫರ್ಟಬಲ್ ಆಗಿರಲ್ಲ, ಮೇಯ್‌ಟೆನೆನ್ಸ್ ಕಾಸ್ಟ್ಲಿ.

ರಾಜೀವ್ ಮಾಗಲ್, ಸಕಲೇಶಪುರ
*ಇಂದಿನ ಯುವತಿಯರು ಹಣೆಗೆ ಕುಂಕುಮ ಇಡದೆ ಲಿಪ್‌ಸ್ಟಿಕ್ ಮಾತ್ರ ಬಳಸುತ್ತಾರಲ್ಲಾ...?*
ಮಾರ್ಕ್ ಉಳಿಯುವ ಕಲಬೆರಕೆ ಕುಂಕುಮಕ್ಕಿಂತ ಶಿಳ್ಳೆ, ರಿಮಾರ್ಕ್ಸ್ ಗಿಟ್ಟಿಸುವ ಲಿಪ್‌ಸ್ಟಿಕ್ಕೇ ವಾಸಿಯೆಂದು.

ಡಿ. ದೊಡ್ಡಲಿಂಗೇಗೌಡ, ಕೊಳ್ಳೇಗಾಲ
*ಮನುಷ್ಯ ಮಾಂಸಾಹಾರಿಯೋ, ಸಸ್ಯಾಹಾರಿಯೋ?*



ಪ್ರತಿ ಮನುಷ್ಯನಲ್ಲೂ ತಲೆ ತಿನ್ನುವ ಗುಣ ಇರುವುದರಿಂದ – ಮಾಂಸಾಹಾರಿಯೇ!

ಕುಮಾರ ಚಲವಾದಿ, ಹೊಳೆನರಸಿಪುರ
*ರಾವಣನನ್ನೇ ಸಂಹರಿಸಿದ ಶ್ರೀರಾಮ ವಾಲಿಯನ್ನೇಕೆ ಮರೆಯಲ್ಲಿ ನಿಂತು ಸಾಯಿಸಿದ?*
ಸಮ್ಮಿಶ್ರವೇ ಹಾಗೆ. ಕೋತಿಗಳೊಡನೆ ಒಪ್ಪಂದ ಮಾಡಿಕೊಂಡರೆ ಮನಸ್ಸಿಗೆ ಒಗ್ಗದ್ದನ್ನೂ ಮಾಡಬೇಕಾಗುತ್ತದೆ.

ಶಿರಾಲಿ ದೀಪಕ್ ಶೇಟ್, ಬೆಂಗಳೂರು
*ಗಂಡು ಕವನ ಬರೆದರೆ ಕವಿ. ಹೆಣ್ಣು ಕವನ ಬರೆದರೆ ಕವಿಯತ್ರಿ; ಈ ತ್ರಿ(3) ಯಾಕೆ?*
ಆಕೆಯ ಕವನಗಳಲ್ಲಿ ಕೈಫಿ–ಯತ್, ಇನ್ಸಾನಿ–ಯತ್, ನಿ–ಯತ್ ಎಂಬ ಯತ್ 3 ಗಳು ಇರುತ್ತವಂತೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಹೆಂಡತಿಗೂ, ಹಣಕ್ಕೂ ಏನು ವ್ಯತ್ಯಾಸ?*
ಹೆಂಡತಿ ಬೆಳ್ಳಗಿರಬೇಕೆಂದು ಬಯಸುತ್ತಾರೆ; ಹಣ ಕಪ್ಪಾದರೂ ಪರವಾಗಿಲ್ಲ.

■ ರಾಮ್